**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 3/2024**

ಫ್ರಾಸಾ-02

ಚಾಸಾ-01

| | | |
|---|---|---|
| ಸಾಕ್ಷಿಯ ಹೆಸರು | - | ಲಕ್ಷ್ಮಿ ದೇಗಿನಾಳ |
| ತಂದೆ ಹೆಸರು | - | ಶಿವಣ್ಣ |
| ವಯಸ್ಸು | - | 27 ವರ್ಷ |
| ಉದ್ಯೋಗ | - | ಪಿ.ಎಸ್.ಐ , ವಿಜಯಪುರ ಗ್ರಾಮೀಣ ಠಾಣೆ |
| ವಾಸಸ್ಥಳ | - | ವಿಜಯಪುರ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 13-11-2025 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ಜುಲೈ 2023 ರಿಂದ ನವೆಂಬರ 2024 ರ ವರೆಗೆ ನಾನು ಧಾರವಾಡ ಸೆನ್ ಪೋಲಿಸಠಾಣೆಯಲ್ಲಿ ಕೆಲಸ ಮಾಡಿದ್ದೇನೆ. ಆಗ ಸಾಕ್ಷಿದಾರರಾದ ಯು ಡಿ ದುದಾಳಕರ ಎ ಎಸ್ ಐ ಆಗಿ ಕೆಲಸ ಮಾಡುತ್ತಿದ್ದರು, ಎಚ್ ಬಿ ಐಹೊಳೆ ಎಚ್ ಸಿ ಆಗಿ , ಎಂ ಜೆ ಪಾಟೀಲ ಎಚ್ ಸಿ ಆಗಿ, ಎನ್ ಕರ್ಜಗಿ ಪಿಸಿ ಆಗಿ , ಎನ್ ಬಿ ಬೋಗೂರ ಕೂಡ ಪಿಸಿ ಆಗಿ ನಮ್ಮ ಪೋಲಿಸಠಾಣೆಯಲ್ಲೇ ಆಗ ಕೆಲಸ ಮಾಡುತ್ತಿದ್ದರು. ವಿಜಯ ಸಲಿಕೆಯವರು ಅಣ್ಣಿಗೇರಿ ಪೋಲಿಸಠಾಣೆಯಲ್ಲಿ ಪಿಸಿ ಆಗಿದ್ದರು. ಪಿ ಜೆ ಪಾಟೀಲ ನಮ್ಮ ಪೋಲಿಸಠಾಣೆಯಲ್ಲಿ ಎಚ್ ಸಿ ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-14 ನಾಗನಗೌಡ ಕಟ್ಟಿಮನಿ ಪೋಲೀಸ ಇನ್ಸಪೆಕ್ಟರ ಆಗಿ ಅಲ್ಲಿ ಕೆಲಸ ಮಾಡುತ್ತಿದ್ದರು.

2. ಡಿಸೆಂಬರ್ 26, 2023 ರಂದು ಸಾಯಂಕಾಲ ಸುಮಾರು 4.15 ಕ್ಕೆ ನಾನು ಮತ್ತು ನಮ್ಮ ಎ ಎಸ್ ಐ ರವರು , ಪಿಜೆ ಪಾಟೀಲ , ಎಂ ಜೆ ಪಾಟೀಲ ಮತ್ತು ಇತರರು ಪೆಟ್ರೋಲಿಂಗ್ ನಲ್ಲಿದ್ದೆವು. ಅಕ್ರಮ ಗಾಂಜಾ ಬಗ್ಗೆ ಪೆಟ್ರೊಲಿಂಗ್ ಮಾಡಲು ಹೇಳಿದ್ದರಿಂದ ಪೆಟ್ರೊಲಿಂಗ್ ಡ್ಯೂಟಿಯಲ್ಲಿದ್ದೆವು. ನಾವು ಪೆಟ್ರೋಲಿಂಗ್ ಮಾಡುವಾಗ ಅಣ್ಣಿಗೇರಿಯ ಶೆರೆವಾಡ ಗ್ರಾಮದಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದಾರೆಂದು

ಮಾಹಿತಿ ಬಂತು. ಆ ಕೂಡಲೇ ನಮ್ಮ ಮೇಲಿನ ಅಧಿಕಾರಿಗಳಿಗೆ ಈ ರೀತಿ ಮಾಹಿತಿ ಬಂದಿದೆ ಎಂದು ಹೇಳಿದೆವು. ಆನಂತರ ನಮ್ಮ ಸ್ಟಾಫ್ ಮುಖಾಂತರ ಅಣ್ಣಿಗೇರಿ ಗ್ರಾಮ ಪಂಚಾಯತಿಗೆ ಮತ್ತು ತಹಶೀಲ್ದಾರ ಕಚೇರಿಗೆ ಪತ್ರ ಬರೆದು ನಮಗೆ ಈ ರೀತಿ ಮಾಹಿತಿ ಬಂದಿದೆ ಆದ್ದರಿಂದ ತಾವು ಪಂಚರಾಗಿ ಇದ್ದುಕೊಂಡು ಪಂಚನಾಮೆ ನಡೆಸಿಕೊಡಬೇಕು ಎಂದು ಪತ್ರ ಬರೆದೆವು. ಈಗ ನಾನು ನೋಡುತ್ತಿರುವ ಪತ್ರ ತಹಶೀಲ್ದಾರ ಕಚೇರಿಗೆ ಕೊಟ್ಟ ಪತ್ರ. ಸಾಕ್ಷಿ ಗುರುತಿಸಿದ ಆ ಪತ್ರ ನಿಶಾನೆ ಪಿಃ 9 ಎಂದು ಗುರುತಿಸಲಾಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರುತಿಸಿದ ಆ ಸಹಿಯನ್ನು ನಿಶಾನೆ ಪಿಃ 9(ಎ) ಎಂದು ಗುರುತಿಸಲಾಗಿದೆ. ಈಗ ನಾನು ನೋಡುತ್ತಿರುವ ಪತ್ರ ಗ್ರಾಮ ಪಂಚಾಯತಿಗೆ ಬರೆದ ಪತ್ರ. ಸಾಕ್ಷಿ ಗುರುತಿಸಿದ ಆ ಪತ್ರ ನಿಶಾನೆ ಪಿಃ 10 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 10 (ಎ) ಎಂದು ಗುರುತಿಸಲಾಗಿದೆ. ಆನಂತರ ಅಣ್ಣಿಗೇರಿ ಪೋಲಿಸಠಾಣೆಯವರಿಗೆ ತಮ್ಮ ಲಿಮಿಟನಲ್ಲಿ ಆಗುತ್ತಿರುವುದರಿಂದ ಒಬ್ಬ ಸ್ಟಾಫ್ ಕಳುಹಿಸಿ ಎಂದು ಹೇಳಿದ್ದು ಆಗ ಅವರ ವಿಜಯ ಸಲಿಕೆ ಎನ್ನುವ ಸಿಬ್ಬಂದಿಯನ್ನು ಕಳುಹಿಸಿದರು. ವಿಜಯ ಸಲಿಕೆಯವರಿಗೆ ತೂಕ ಮಾಡುವ ವ್ಯಕ್ತಿಯನ್ನು ಕರೆದುಕೊಂಡು ಬನ್ನಿ ಎಂದು ಹೇಳಿದೆವು. ಆಗ ಪಂಚರ ಮತ್ತು ತೂಕ ಮಾಡುವ ವ್ಯಕ್ತಿ ಎಲ್ಲರೂ ಶೆಲವಡಿ ಗ್ರಾಮದ ಬಸ್ ಸ್ಟಾಂಡನಲ್ಲಿ ಕಾಯುತ್ತಿದ್ದರು. 5.05 ಘಂಟೆ ಸುಮಾರಿಗೆ ನಾವೆಲ್ಲರೂ ಅಲ್ಲಿ ಸೇರಿದ್ದೆವು. ಆಗ ಗ್ರಾಮ ಪಂಚಾಯತಿಯಿಂದ ಈರಪ್ಪ ಶಂಕ್ರಪ್ಪ ಪಡೆಸೂರು ರವರು ಬಂದಿದ್ದರು. ಅವರು ತಹಶೀಲ್ದಾರ ಕಚೇರಿಯಿಂದ ಬಂದಿದ್ದರು. ಆ ರೀತಿ ಕಳುಹಿಸಿದ ಬಗ್ಗೆ ನಿಶಾನೆ ಪಿಃ 9 ರಲ್ಲಿ ಹಿಂಬರಹ ಇದೆ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 9(ಬಿ ) ಎಂದು ಗುರುತಿಸಲಾಗಿದೆ. ಆ ಹಿಂಬರಹ ತಾಲೂಕ ಎಕ್ಸಿಕ್ಯೂಟಿವ್ ಆಫೀಸರ್ ಕೊಟ್ಟಿದ್ದಾರೆ. ಇನ್ನೊಬ್ಬ ಉಮೇಶಗೌಡ ಶೇಖರಗೌಡ ಹಿರೇಗೌಡರ ರವರನ್ನು ಗ್ರಾಮ ಪಂಚಾಯಿತಿಯಿಂದ ನಿಯಮಿಸಿ ಕಳುಹಿಸಿದ್ದರು. ಆ ಬಗ್ಗೆ ನಿಶಾನೆ ಪಿಃ 10 ರಲ್ಲಿ ಹಿಂಬರಹ ಇದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 10(ಬಿ) ಎಂದು ಗುರುತಿಸಲಾಗಿದೆ. ಪಿಸಿ 435 ವಿಜಯ ಸಲಂಕಿಯವರು ತೂಕ ಮಾಡುವವರಾದ ಕಾಶೀಮ

ಮಹಮ್ಮದಸಾಬ ತಹಶೀಲ್ದಾರ ರವರನ್ನು ಮತ್ತು ತೂಕ ಮಾಡುವ ಯಂತ್ರವನ್ನು ತೆಗೆದುಕೊಂಡು ಬಂದರು. ಆಗ ಅವರಿಗೆ ನಮ್ಮನ್ನು ಪರಿಚಯ ಮಾಡಿಕೊಂಡು ಎಲ್ಲ ವಿಚಾರ ಹೇಳಿ ತೂಕ ಮಾಡಬೇಕು ಎಂದು ಹೇಳಿದೆವು. ಆ ಬಗ್ಗೆ ತೂಕ ಮಾಡುವವರಿಗೆ ಪತ್ರ ಕೊಟ್ಟೆವು ಮತ್ತು ಪಂಚರಿಗೆ ಕೂಡ ಪಂಚನಾಮೆಗೆ ಸಹಕರಿಸಲು ಪತ್ರ ಕೊಟ್ಟೆವು. ಈಗ ನಾನು ನೋಡುತ್ತಿರುವ ಪತ್ರ ಈರಪ್ಪ ಪಡೆಸೂರ ರವರಿಗೆ ಕೊಟ್ಟ ಪತ್ರ. ಸಾಕ್ಷಿ ಗುರುತಿಸಿದ ಪತ್ರ ಈಗಾಗಲೇ ನಿಶಾನೆ ಪಿಃ 2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 2(ಬಿ) ಎಂದು ಗುರುತಿಸಲಾಗಿದೆ. ಈಗ ನಾನು ನೋಡಿದ ಪತ್ರ ಉಮೇಶ ಶೇಖರಗೌಡ ಹಿರೇಗೌಡ ರವರಿಗೆ ಕೊಟ್ಟ ಪತ್ರ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 11 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 11(ಎ) ಎಂದು ಗುರುತಿಸಲಾಗಿದೆ. ತೂಕ ಮಾಡುವ ಕಾಶೀಮ ರವರಿಗೆ ಕೊಟ್ಟ ಪತ್ರ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆ ಪತ್ರವನ್ನು ನಿಶಾನೆ ಪಿಃ 12 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 12 (ಎ) ಎಂದು ಗುರುತಿಸಲಾಗಿದೆ. ಆನಂತರ ಆ ಮೂರು ಮಂದಿ ನೋಟೀಸು ತೆಗೆದುಕೊಂಡು ತಮ್ಮ ಒಪ್ಪಿಗೆ ಪತ್ರ ಕೊಟ್ಟರು. ಈರಪ್ಪ ಪಡೆಸೂರ ಕೊಟ್ಟ ಒಪ್ಪಿಗೆ ಪತ್ರ ನಿಶಾನೆ ಪಿಃ 3 ಸಾಕ್ಷಿ ಗುರುತಿಸಿರುತ್ತಾರೆ. ಅದರಲ್ಲಿರುವ ತನ್ನ ಸಹಿ ಕೂಡ ಗುರುತಿಸಿರುತ್ತಾರೆ , ಅದನ್ನು ನಿಶಾನೆ ಪಿಃ 3 (ಬಿ) ಎಂದು ಗುರುತಿಸಲಾಗಿದೆ. ಅದೇರೀತಿ ಉಮೇಶ ಗೌಡ ಕೊಟ್ಟ ಒಪ್ಪಿಗೆ ಪತ್ರ ಕೂಡ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 13 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 13 (ಎ) ಎಂದು ಗುರುತಿಸಲಾಗಿದೆ. ಅದೇರೀತೀ ಕಾಶೀಮ ರವರ ಒಪ್ಪಿಗೆ ಪತ್ರ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿಃ 14 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 14(ಎ) ಎಂದು ಗುರುತಿಸಲಾಗಿದೆ.

3. ನಂತರ ಅವರುಗಳನ್ನೆಲ್ಲ ಗವರ್ನಮೆಂಟ ಜೀಪನಲ್ಲಿ ಮತ್ತು ಇಬ್ಬರನ್ನು ಮೋಟಾರ ಸೈಕಲನಲ್ಲಿ ಬರಲು ಹೇಳಿ ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ನಾನು , ಒಬ್ಬ ಡ್ರೈವರ್ , ಎ ಎಸ್ ಐ , ಇಬ್ಬರು ಪಂಚರು , ತೂಕ ಮಾಡುವ ವ್ಯಕ್ತಿ ಎಲ್ಲರೂ ಜೀಪನಲ್ಲಿ ಹೋದೆವು. ಉಳಿದವರು ಮೋಟಾರ ಸೈಕಲನಲ್ಲಿ ಬಂದರು. ಶೆಲವಡಿ ಊರಿಗೆ ಹೋದೆವು ಅಲ್ಲಿ ಆ ಜಮೀನಿಂದ 50 ಮೀಟರ ಅಂತರದಲ್ಲಿ ನಿಂತು ಮರೆಯಾಗಿ ನೋಡುತ್ತಿದ್ದೆವು. ಜಮೀನಿನ ಪಕ್ಕ ಒಬ್ಬ ವ್ಯಕ್ತಿ ನಿಂತಿದ್ದು ನಾವು ವಿಚಾರಿಸಿದಾಗ ನಮ್ಮನ್ನು ನೋಡಿ ಓಡಲು ಪ್ರಯತ್ನಪಟ್ಟರು. ಆಗ ನಮ್ಮ ಸ್ಟಾಫ್ ಹೋಗಿ ಅವರನ್ನು ನಿಲ್ಲಿಸಿದರು. ಆಗ ಸಮಯ ಸಂಜೆ 5.45 ಆಗಿತ್ತು.ಆಗ ಅವರ ಹೆಸರ ವಿಳಾಸ ಕೇಳಲಾಯಿತು. ಅವರು ತಮ್ಮ ಹೆಸರು ವಿಳಾಸ ಗುರುಶಾಂತಪ್ಪ ತಂದೆ ಸೋಮಪ್ಪ ಬಳಿಗೇರ , ವಯಸ್ಸು 55 ಎಂದು ಹೇಳಿದರು. ಅವರು ತಮ್ಮ ಗ್ರಾಮ ಶೆಲವಡಿ ಗ್ರಾಮ , ಬಳಿಗೇರ ಓಣಿ ಎಂದು ಹೇಳಿದರು. ಅವರು ನ್ಯಾಯಾಲಯದಲ್ಲಿ ಈಗ ಇದ್ದಾರೆ ಎಂದು ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅಗ ಅವರನ್ನು ಆ ಜಮೀನು ಯಾರದು ಸರ್ವೆ ನಂಬರ ಎನು ಎಂದು ಕೇಳಿದೆವು. ಆಗ ಅವರು ಸರ್ವೆ ನಂಃ 456/1 ಎಂದು ಹೇಳಿದರು. ಆಗ ನಮಗೆ ಇದೇ ಜಾಗ ಎಂದು ಖಚಿತವಾಯಿತು. ಅಗ ಅವರಿಗೆ ನೀವು ಗಾಂಜಾ ಬೆಳೆದಿದ್ದೀರಾ ನಿಮ್ಮ ಜಮೀನು ಶೋಧನೆ ಮಾಡಬೇಕು ಎಂದು ಹೇಳಿದೆವು. ನಮ್ಮ ಪರಿಚಯ ಅವರಿಗೆ ಮಾಡಿಕೊಟ್ಟೆವು. ಅವರಿಗೆ ಆ ಬಗ್ಗೆ ನೋಟೀಸ ಕೊಟ್ಟೆವು. ಸಾಕ್ಷಿ ಆ ನೋಟೀಸ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಆ ನೋಟೀಸ ನಿಶಾನೆ ಪಿಃ 15 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 15 (ಎ) ಎಂದು ಗುರುತಿಸಲಾಗಿದೆ. ಅದಕ್ಕೆ ಆರೋಪಿ ಹೆಬ್ಬೆಟ್ಟು ಗುರುತು ನನ್ನ ಮುಂದೆ ಹಾಕಿದ್ದಾರೆ. ಸಾಕ್ಷಿ ಆ ಹೆಬ್ಬೆಟ್ಟು ಗುರುತು ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 15 (ಬಿ) ಎಂದು ಗುರುತಿಸಲಾಗಿದೆ.

4. ಅನಂತರ ಆರೋಪಿಯನ್ನು ಅಂಗ ಜಪ್ತಿ ಪತ್ರಾಂಕಿತ ಅಧಿಕಾರಿ ಮುಂದೆ ಮಾಡಬೇಕೋ ಅಥವಾ ನ್ಯಾಯಾಧೀಶರ ಮುಂದೆ ಮಾಡಬೇಕೋ ಅಥವಾ ನಾವೆ ಮಾಡಬಹುದಾ ಎಂದು ನಿಶಾನೆ ಪಿಃ 15 ನೋಟೀಸನಲ್ಲಿ ಕೇಳಿದ್ದೆವು ಆಗ ಆತ ನೀವೆ ಮಾಡಿ ಎಂದು ಉತ್ತರ ಕೊಟ್ಟ . ಸಾಕ್ಷಿ ಅವರು ಕೊಟ್ಟ ಉತ್ತರ ನೋಡಿ ಗುರುತಿಸಿರುತ್ತಾರೆ. ಆ ಉತ್ತರ ನಿಶಾನೆ ಪಿಃ 16 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 16 (ಎ) ಎಂದು ಮತ್ತು ಸಾಕ್ಷಿ ಗುರುತಿಸಿದ ಆರೋಪಿಯ ಹೆಬ್ಬೆಟ್ಟು ಗುರುತನ್ನು ನಿಶಾನೆ ಪಿಃ 16 (ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ತಾವು ನಿಶಾನೆ ಪಿಃ 15 ಮತ್ತು 16 ರ ಸಂಗತಿಗಳನ್ನು ಆರೋಪಿಗೆ ಓದಿ ಹೇಳಿ ನಂತರ ಅವರು ಒಪ್ಪಿಗೆ ನೀಡಿದ ಮೇಲೆ ಹೆಬ್ಬೆಟ್ಟು ಗುರುತು ಹಾಕಿದ್ದಾರೆ ಎಂದು ಹೇಳಿರುತ್ತಾರೆ. ಆನಂತರ ಅವರ ಜಮೀನಿಗೆ ಹೋಗಿ ಅವರು ಎನುಬೆಳೆ ಬೆಳೆದಿದ್ದಾರೆಂದು ನೋಡಿದೆವು, ಅಲ್ಲಿ ಮೆಣಸಿನ ಗಿಡ ಮತ್ತು ಉಳ್ಳಾಗಡ್ಡಿ ಗಿಡ ಬೆಳೆದಿದ್ದರು. ಆಗ ಅಲ್ಲಿ ಹೋಗಿ ನಾವು ಹುಡುಕಿದೆವು. ಅಲ್ಲಲ್ಲಿ ಗಾಂಜಾ ಗಿಡ ಬೆಳೆದಿದ್ದು ಕಂಡುಬಂತು. ಅಲ್ಲ 7 ಗಿಡ ಇತ್ತು. ಅದು ಒಂದುವರೆಯಿಂದ ಎರಡುವರೆ ಪೂಟ ಎತ್ತರಕ್ಕೆ ಬೆಳೆದಿತ್ತು. ನಾವು ನಮ್ಮ ಸಿಬ್ಬಂದಿ ಪಂಚರ ಸಮಕ್ಷಮ ಆ ಗಿಡಗಳನ್ನು ಕಿತ್ತೆವು. ಮಣ್ಣು ಜಾಡಿಸಿ ತೂಕ ಮಾಡುವ ವ್ಯಕ್ತಿಯಿಂದ ಅದನ್ನು ತೂಕ ಮಾಡಿಸಿದೆವು.ಅದು 2 ಕೆ ಜಿ 432 ಗ್ರಾಂ ಇತ್ತು.

**ಮುಂದಿನ ಮುಖ್ಯ ವಿಚಾರಣೆ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

5.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಪಿ ಹೆಚ್ ಹೆಚ್ ವಕೀಲರಿಂದ**

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.